# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ನಂ. 1279/2025

ಚಾಸಾ 1 ಫ್ರಾಸಾ 1

ಸಾಕ್ಷಿಯ ಹೆಸರು : ಗಣೇಶ್

ತಂದೆಯ ಹೆಸರು : ಸೋಮಯ್ಯ

ವಯಸ್ಸು : 39 ವರ್ಷ

ಉದ್ಯೋಗ : ಪಿ ಎಸ್ ಐ

ವಾಸ ಸ್ಥಳ : ಕುಶಾಲನಗರ

ಸಾಕ್ಷಿಯನ್ನು ದಿನಾಂಕಃ 26.02.2026 ರಂದು ಕರೆದು ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 28.01.2023 ರಿಂದ ದಿನಾಂಕಃ 12.08.2024 ರವರಗೆ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29.02.2024ರಂದು ಸಮಯ 4.00 ಗಂಟೆಯಲ್ಲಿ ನಾನು ಠಾಣೆಯಲ್ಲಿರುವಾಗ, ಇಕ್ಕಡಹಳ್ಳಿ ಗ್ರಾಮದ ಸಿದ್ದಪ್ಪ ಅಃ ಚಿಕ್ಕಬೋಳ ಎಂಬುವರು ತಮ್ಮ ಜಮೀನಿನಲ್ಲಿ ಅಕ್ರಮವಾಗಿ ನಾಡ ಬಂದೂಕು ಇಟ್ಟಿರುವುದಾಗಿ ಮಾಹಿತಿ ಬಂದಿರುತ್ತದೆ. ಆ ನಂತರ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿರುತ್ತೇನೆ. ನಂತರ ಚಾಸಾ 4ರವರಿಗೆ ದೂರವಾಣಿ ಮೂಲಕ ಮಾಹಿತಿ ತಿಳಿಸಿ, ಪಂಚರಾಗುವಂತೆ ಕೋರಿಕೊಂಡಿರುತ್ತೇನೆ. ನಂತರ ಠಾಣಾ ಸಿಬ್ಬಂದಿಗಳಾದ ಚಾಸಾ 5 ರಿಂದ ಚಾಸಾ 7 ರವರನ್ನು ಕರೆದುಕೊಂಡು ಇಲಾಖಾ ಜೀಪ್ ನಲ್ಲಿ ದೊಡ್ಡಿಂದುವಾಡಿ ಸರ್ಕಲ್ ಬಳಿ ಹೋಗಿ ಅಲ್ಲಿ ಚಾಸಾ 2 ಮತ್ತು ಚಾಸಾ 3ರವರನ್ನು ಬರಮಾಡಿಕೊಂಡು ಬಾತ್ಮಿಯ ವಿಚಾರ ತಿಳಿಸಿ ಅವರನ್ನು ಪಂಚರಾಗಲು ಒಪ್ಪಿದ ನಂತರ ಅವರನ್ನೂ ಸಹಾ ಕರೆದುಕೊಂಡು ಇಕ್ಕಡಹಳ್ಳಿ ಗ್ರಾಮದ ಬೋಳಮ್ಮ ದೇವಸ್ಥಾನದ ಕರಿಯನ ಗುಡ್ಡದ ಬಳಿ ಜೀಪ್ ಅನ್ನು ಮರೆಯಾಗಿ ನಿಲ್ಲಿಸಿ, ದೇವಸ್ಥಾನದ ಬಳಿ ಇದ್ದ ಚಾಸಾ 4ರವರನ್ನೂ ಕರೆದುಕೊಂಡು, ಬಾತ್ಮಿದಾರರ ತಿಳಿಸಿದ ಸ್ಥಳಕ್ಕೆ ನಡೆದುಕೊಂಡು ಹೋಗಿದ್ದೆವು. ನಮ್ಮನ್ನು ನೋಡಿದ ಆರೋಪಿ ಸ್ಥಳದಿಂದ ಪರಾರಿಯಾಗಿರುತ್ತಾನೆ. ನಾವು ಮಾಹಿತಿಯಲ್ಲಿ ತಿಳಿಸಿದ ಸ್ಥಳಕ್ಕೆ ಹೋಗಿ ನೋಡಲಾಗಿ, ಹನಿನೀರಾವರಿ ಮಾಡಲು ಹಾಕಿದ್ದ ಕಪ್ಪು ಪೈಪ್ ನಡುವೆ ಒಂದು ನಾಡ ಬಂದೂಕು ಹಾಗೂ ಒಂದು ಖಾಕಿ ಬಣ್ಣದ ಬಟ್ಟೆ ಬ್ಯಾಗ್ ದೊರಕಿದ್ದು ಅದನ್ನು ಪರೀಲಿಸಲಾದ ಸುಮಾರು 154 ಸೆಂಟಿ ಮೀಟರ್ ನ ನಾಡ ಬಂದೂಕು ಆಗಿರುತ್ತದೆ. ಬಟ್ಟೆ ಬ್ಯಾಗ್ ಅನ್ನು ಪರಿಶೀಲಿಸಿದಾಗ 12 ಸೀಸದ ತುಂಡುಗಳು ಹಾಗೂ 187 ಸಣ್ಣ ಸೈಕಲ್ ಬಾಲ್ ಗಳು ಸಿಕ್ಕಿರುತ್ತದೆ. ಒಂದು ಕ್ರಿಮಿನಾಶಕದ ಡಬ್ಬಿಯಲ್ಲಿ ಕಪ್ಪು ಬಣ್ಣದ ಮದ್ದಿನ ಪುಡಿ ಇರುವುದು ಕಂಡು ಬಂದಿತ್ತು. ಎಲ್ಲಾ ಸಾಮುಗ್ರಿಗಳನ್ನು ಪಂಚರು ಹಾಗೂ ಸಿಬ್ಬಂದಿಗಳ ಸಮಕ್ಷಮ ಅಮಾನತ್ತು ಪಡಿಸಿಕೊಂಡು, ಎಲ್ಲಾ ವಸ್ತುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಬ್ಯಾಗ್ ಗೆ ಹಾಕಿ, ಹೊಲಿದು , 'ಎಸ್ 'ಎಂಬ ಅಕ್ಷರದಿಂದ ಸೀಲು ಮಾಡಲಾಯಿತು.

ನ್ಯಾಯಾಲಯದ ಸಮಕ್ಷಮ ಇರುವ (1) ಒಂದು ನಾಡ ಬಂದೂಕು,(2) ಕಟಿಂಗ್ ಪ್ಲೇಯರ್, (3) ಖಾಕಿ ಬಣ್ಣದ ಬ್ಯಾಗ್, (4) 10 ಬೇರಿಂಗ್ ಬಾಲ್ಸ್‌ಗಳು, (5) 12 ಸೀಸದ ಗುಂಡುಗಳು, (6) ಒಂದು ಅಲ್ಯುಮಿನಿಯಂ ಡಬ್ಬಣದಲ್ಲಿರುವ ಕಪ್ಪು ಬಣ್ಣದ ಮದ್ದಿನ ಪುಡಿ, (7) 187 ಸಣ್ಣ ಸೈಕಲ್ ಬಾಲ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೇಮಾಲು 1 ರಿಂದ 7 ಎಂದು

ಗುರುತಿಸಲಾಯಿತು. ಸದರಿ ವಸ್ತುಗಳನ್ನು ನಾವು ಆರೋಪಿಯ ಜಮೀನಿನಿಂದ ಅಮಾನತ್ತು ಪಡಿಸಿಕೊಂಡಿದ್ದೆವು ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು. ಆ ದಿನ ಮಹಜರ್ ಅನ್ನು ಸಂಜೆ 5.00 ರಿಂದ 6.00 ಗಂಟೆಯವರಗೆ ಬರೆಯಲಾಗಿತ್ತು. ಆ ದಿನ ನಾವು ಸ್ಥಳಕ್ಕೆ 4.45 ಗಂಟೆಗೆ ಹೋಗಿದ್ದೆವು. ಆ ದಿನ ಫೋಟೋಗಳನ್ನು ತೆಗೆಸಲಾಗಿತ್ತು. ಸಾಕ್ಷಿಯು ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–2 ರಿಂದ ನಿಪಿ–5 ಎಂದು ಗುರುತಿಸಲಾಯಿತು.

ನಾವು ಸ್ಥಳಕ್ಕೆ ಹೋಗುವ ಸಮಯದಲ್ಲಿ ಆರೋಪಿಯು ಓಡಿ ಹೋಗಿದ್ದು, ಆತನನ್ನು ಚಾಸಾ 2ರವರು ಗುರುತಿಸಿರುತ್ತಾರೆ. ನಾವು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದೆವು, ಆದರೆ ಆಗಲಿಲ್ಲ. ನಂತರ ಮಾಲು ಮತ್ತು ಮಹಜರ್ ನೊಂದಿಗೆ ಠಾಣೆಗೆ ಹಾಜರಾಗಿ, ಚಾಸಾ 16ರವರಿಗೆ ಸ್ವ-ವರದಿಯೊಂದಿಗೆ ನೀಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಸ್ವ ವರದಿ ಆಗಿದ್ದು ಅದನ್ನು ನಿಪಿಃ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 6 (ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಕೆ ಎಸ್ ವಕೀಲರಿಂದ**

ಆ ದಿನ ದಾಳಿ ಮಾಡಿದ ಜಮೀನು ಆರೋಪಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಆ ಬಗ್ಗೆ ನನಗೆ ಚಾಸಾ 2ರವರು ಹೇಳಿದ್ದರು. ನಾನು ದಾಳಿ ಮಾಡಿದ ಜಮೀನಿಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ–2 ರಿಂದ ನಿಪಿ–5 ಫೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಪಂಚರನ್ನೂ ಸಹಾ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಪಂಚರನ್ನು ಆ ದಿನ ನಾವು ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಕುಳಿತು ದಾಖಲಾತಿಗಳನ್ನು ಬನಾವಟ್ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಮುದ್ದೇಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮುದ್ದೇಮಾಲುಗಳ ದಾಸ್ತಾನು ಹೊಂದಿಲ್ಲದೇ ಇದ್ದರೂ ಸಹಾ ಠಾಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ.ಎಂ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ